# IV Semester B.Com. Examination, May/June 2013
## (Fresh) (Semester Scheme)
## (2012-13 and Onwards)
## COMMERCE
## Paper – 4.3 – Corporate Accounting – II

Time : 3 Hours Max. Marks : 100

***Instruction :*** *Answer should be **completely** written either in **English** or in **Kannada**.*

SECTION – A

Answer **any eight** sub-questions. **Each** sub-question carries **2** marks. **(8×2=16)**

1. a) Distinguish between Amalgamation and Absorption.

   b) What is purchase consideration ?

   c) Give any 2 provisions relating to capital reduction under the Indian Companies Act.

   d) Who are preferential creditors ? Give an example.

   e) State any two objectives of absorption.

   f) Mention the types of liquidation of companies.

   g) Who are contributories ?

   h) Can the debentures given by a purchasing company be treated as a part of purchase consideration ? Why ?

   i) When the net asset value exceeds the purchase price of the business taken over, how is the difference dealt with ?

   j) What are the functions of a liquidator ?

SECTION – B

Answer **any three** questions. **Each** question carries **8** marks. **(3×8=24)**

2. A Co. Ltd. made arrangements for its reconstruction. The shareholders had agreed to receive the following in exchange for 1,00,000 equity shares of Rs.10 each held by them :

P.T.O.

45

a) Fully paid equity shares upto the extent of 2/5th of their present holding.

b) 5% preference shares upto the extent of 1/5th of the above new equity shares as per condition (a), and

c) 6% debentures of Rs. 1,20,000.

Further the company issued debentures of Rs. 1,00,000 to the public and the company received the amount in cash.

Goodwill of Rs.4,00,000 was to be reduced to Rs. 3,00,000; Machinery to be reduced from Rs. 2,00,000 to Rs. 1,50,000 and leasehold property to be reduced from Rs. 3,00,000 to Rs. 2,50,000.

Give journal entries to the above scheme.

3. The following is the Balance Sheet of A Co. Ltd. as on 31-03-2013.

| **Liabilities** | **Rs.** | **Assets** | **Rs.** |
|---|---|---|---|
| Share Capital: | | Land and Buildings | 2,00,000 |
| Shares of Rs.10 each | 3,00,000 | Machinery | 1,00,000 |
| Creditors | 60,000 | Furniture | 10,000 |
| Bank overdraft | 40,000 | Debtors | 20,000 |
| | | Stock | 20,000 |
| | | Cash in hand and at bank | 50,000 |
| | **4,00,000** | | **4,00,000** |

The above company was liquidated and all the assets and liabilities were sold to B Co.Ltd for a total purchase consideration of Rs. 4,00,000 which was to be paid in

a) Cash Rs. 1,00,000 and

b) 20,000 Equity shares of Rs. 10 each at a premium of Rs. 5 per share.

Pass opening journal entries in the books of B. Co. Ltd. assuming that Rs. 20,000 realisation expenses were paid by purchasing company.

4. The following are the Balance Sheets of A Ltd. and B Ltd. as on 31-03-2013.

| **Liabilities** | **A Ltd. Rs.** | **B Ltd. Rs.** | **Assets** | **A Ltd. Rs.** | **B Ltd. Rs.** |
|---|---|---|---|---|---|
| Share capital : | | | Fixed Assets | 2,70,000 | 1,40,000 |
| Shares of | | | | | |
| Rs.10 each | 3,00,000 | 1,50,000 | Debtors | 80,000 | 60,000 |
| Reserve Fund | 60,000 | 40,000 | Stock | 50,000 | 30,000 |
| Creditors | 60,000 | 40,000 | Bills Receivable | 15,000 | 4,000 |
| Bills payable | 5,000 | 10,000 | Bank | 10,000 | 6,000 |
| | **4,25,000** | **2,40,000** | | **4,25,000** | **2,40,000** |

Both the companies decided to amalgamate and form C Ltd. to take over the assets and liabilities of both the companies.

i) The shareholders of A Ltd. have issued 4 shares of Rs. 10 each at Rs.12.50 per share in exchange for 3 shares in A Ltd.

ii) The assets and liabilities of B. Ltd. are to be taken at book values subject to 5% provision on debtors and B/R and 10% depreciation on fixed assets. Goodwill of B. Ltd. was valued at Rs. 27,200. The purchase consideration is settled in shares of Rs.10 each at Rs.12.50 per share.

Calculate purchase consideration and prepare the Balance Sheet of C Ltd.

5. Unfortunate Co. Ltd. went into voluntary liquidation on 31st March 2013 when its position was as under :

Unsecured creditors Rs. 2,00,000 including Rs. 25,000 which are preferential. Creditors secured on plant and machinery stood at Rs. 1,00,000. Cash in hand was Rs. 5,000. The liquidator realised plant and machinery for Rs.75,000 and the other assets realised Rs. 50,000. The liquidation expenses came to Rs. 5,000 and the liquidator's remuneration was fixed at 4% of the amount realised including cash balance and 2% of the amount distributed to unsecured creditors including preferential creditors.

You are required to prepare the Liquidator's Final Statement of Account.

6. Distinguish between Internal Reconstruction and External Reconstruction.

SECTION – C

Answer **any four** of the following. **Each** question carries **15** marks. **(4×15=60)**

7. A Co. Ltd. went into voluntary liquidation on 31-12-2011. The Balance Sheet as on that date was as follows.

| **Liabilities** | **Rs.** | **Assets** | **Rs.** |
|---|---|---|---|
| Share Capital : | | Land and Buildings | 2,00,000 |
| 4000, 6% Preference | | | |
| Shares of Rs. 100 each | 4,00,000 | Plant and Machinery | 5,00,000 |
| 2000 Equity shares | | Patents | 80,000 |
| of Rs.100 each, Rs.75 | | Stock at cost | 1,10,000 |
| paid | 1,50,000 | Debtors | 2,20,000 |
| 6000 Equity shares | | Cash at Bank | 60,000 |
| of Rs.100 each, | | Profit and Loss A/c | 2,40,000 |
| Rs. 60 paid | 3,60,000 | | |
| 5% Debentures | 2,00,000 | | |
| Interest outstanding | | | |
| on debentures | 10,000 | | |
| Creditors | 2,90,000 | | |
| | **14,10,000** | | **14,10,000** |

The preference dividends were in arrears for two years. Creditors include a loan for Rs.1,00,000 on the mortgage of land and buildings.

The assets were realised as follows :

Land and Buildings Rs. 2,40,000; Plant and Machinery Rs.4,00,000; Patents Rs.60,000, Stock Rs.1,20,000 and Debtors Rs.1,60,000.The expenses of liquidation amounted to Rs. 21,800. The liquidation is entitled to a commission of 3% on all assets realised except cash and 2% on amount paid to unsecured creditors. Preferential creditors amount to Rs. 30,000.

Assume that the payments were made on 30-06-2012. Prepare Liquidator's Final Statement of Account.

8. X Ltd. agreed to purchase the business of Y Ltd. on 31-03-2013 and agreed to take over the assets except cash and goodwill at 10% less than the book values and to pay Rs.1,60,000 for goodwill and to take over the debentures.

Following is the Balance Sheet of Y Ltd. as on 31-03-13.

| **Liabilities** | **Rs.** | **Assets** | **Rs.** |
|---|---|---|---|
| 4000 shares of | | Goodwill | 1,00,000 |
| Rs.100 each | 4,00,000 | Land and Buildings | 3,00,000 |
| General Reserve | 1,40,000 | Plant and Machinery | 1,66,000 |
| 5% Debentures | 2,00,000 | Stock | 70,000 |
| Creditors | 60,000 | B/R | 9,000 |
| | | Debtors | 55,000 |
| | | Cash at Bank | 1,00,000 |
| | **8,00,000** | | **8,00,000** |

The purchase consideration was to be discharged by the allotment of 3000 shares of Rs.100 each at a premium of Rs.10 per share and the balance in cash.

Prepare necessary ledger accounts in the books of Y Ltd. and pass journal entries in the books of X Ltd.

9. Z Co. Ltd. after a series of heavy losses, resolve to go into voluntary liquidation and to reconstruct by means of a new company under the name Z New Co.Ltd. On the date of reconstruction the Balance Sheet of Z Co.Ltd is as follows :

| **Liabilities** | **Rs.** | **Assets** | **Rs.** |
|---|---|---|---|
| Share Capital | | Buildings | 3,92,500 |
| 200000 shares of | | Machinery | 2,39,000 |
| Rs. 5 each | 10,00,000 | Furniture | 19,400 |
| Sundry Creditors | 30,000 | Stock | 91,410 |
| Bank Loan | 15,000 | Sundry Debtors | 1,09,100 |
| Bills Payable | 10,000 | Bank | 3,590 |
| | | P/L A/c | 2,00,000 |
| | **10,55,000** | | **10,55,000** |

The following is the scheme of reconstruction :

i) The New Co. to take over assets of the old company and not the liabilities.

ii) Capital of the New Co. is to consist of 500000 shares of Rs. 5 each.

iii) The New Co. is to issue 280000 shares of Rs. 5 each, credited with Rs. 2.50 per share as paid up to the old company and to pay to it Rs.1,00,000 in cash by way of purchase consideration.

iv) The balance of Rs. 2.50 per share payable by the members of the new company is duly received.

Show the necessary ledger accounts in the books of X Co.Ltd and the Balance Sheet of X New Co.Ltd.

10. The Balance Sheet of A Co.Ltd. stood as follows :

| **Liabilities** | **Rs.** | **Assets** | **Rs.** |
|---|---|---|---|
| 38000 shares of | | Land and Buildings | 2,00,000 |
| Rs.100 each | 38,00,000 | Machinery | 5,20,000 |
| Debentures | 2,00,000 | Furniture | 40,000 |
| Creditors | 2,00,000 | Stock | 7,40,000 |
| | | Debtors | 3,60,000 |
| | | Goodwill | 4,00,000 |
| | | P/L A/c | 19,40,000 |
| | **42,00,000** | | **42,00,000** |

The company is to be reconstructed as follows :

a) The shares of Rs.100 each are to be reduced to an equal number of fully paid shares of Rs. 40 each.

b) To issue 2000 new shares of Rs.40 each as fully paid up to debenture holders in full settlement.

c) The amount available is to be utilised in writing off the goodwill and P/L A/c and the balance in writing down the value machinery.

d) The Authorised capital of the company is 40000 shares of Rs.100 each.

Give the journal entries, prepare Capital Reduction Account and Reconstructed Balance Sheet.

11. Given below are the Balance Sheets of two companies as on 31-03-2013.

**A Co.Ltd**

| **Liabilities** | **Rs.** | **Assets** | **Rs.** |
|---|---|---|---|
| Shares of Rs.10 each | | Goodwill | 3,00,000 |
| fully paid up | 30,00,000 | Freehold property | 8,00,000 |
| Share premium | 9,000 | Machinery | 7,00,000 |
| General Reserve | 2,00,000 | Stock | 13,64,000 |
| P/L A/c | 3,31,300 | Debtors | 5,17,000 |
| 8% Debentures | 7,00,000 | Bank | 6,75,000 |
| Sundry Creditors | 1,15,700 | | |
| | **43,56,000** | | **43,56,000** |

**B Co. Ltd.**

| **Liabilities** | **Rs.** | **Assets** | **Rs.** |
|---|---|---|---|
| Shares of Rs.10 each | | Goodwill | 1,00,000 |
| fully paid | 7,80,000 | Freehold property | 3,60,000 |
| 10% Debentures | 1,40,000 | Machinery | 2,00,000 |
| B.O.D. | 12,000 | Stock | 3,24,000 |
| Sundry Creditors | 5,14,000 | Debtors | 1,90,000 |
| | | P/L A/c | 2,72,000 |
| | **14,46,000** | | **14,46,000** |

The two companies decided to amalgamate their businesses as on the date of Balance Sheet and a new company called AB Co.Ltd was formed with an authorised capital of Rs. 50,00,000 in shares of Rs.10 each. The terms of amalgamation were :

**A Co.Ltd.:**

i) 6 shares of Rs.10 each fully paid in the new company in exchange for every 5 shares in A Ltd. and Rs.20,000 in cash.

ii) The debenture holders were to be allotted such debentures in the new company bearing interest at 7% p.a. as would bring the same amount of interest.

**B Co.Ltd. :**

i) One share of Rs.10 each fully paid in the new company in exchange for every 3 shares in B Ltd. and Rs.10,000 in cash.

ii) The Debenture holders were to be allotted such debentures in the new company bearing interest at 7% p.a. as would bring the same amount of interest.

The new company took over all the assets and liabilities of the two companies.

Record the entries in the books of AB Co. Ltd. to give effect to the above arrangements. Also prepare the opening Balance Sheet.

## ಕನ್ನಡ ಆವೃತ್ತಿ

## ವಿಭಾಗ - ಎ

ಎಂಟು ಉಪಪ್ರಶ್ನೆಗಳನ್ನು ಉತ್ತರಿಸಿ, ಪ್ರತಿ ಉಪಪ್ರಶ್ನೆಗೆ **2** ಅಂಕಗಳು. **(8×2=16)**

1. a) ವಿಲೀನೀಕರಣ ಮತ್ತು ಸಮ್ಮಿಲನಗಳಿಗಿರುವ ವ್ಯತ್ಯಾಸ ತಿಳಿಸಿ.

b) ಖರೀದಿ ಬೆಲೆ ಎಂದರೇನು ?

c) ಭಾರತೀಯ ಕಂಪೆನಿ ಕಾಯ್ದೆಯ ಪ್ರಕಾರ ಕಂಪೆನಿಯ ಷೇರು ಬಂಡವಾಳವನ್ನು ಕಡಿಮೆ ಮಾಡುವಾಗ ಅನುಸರಿಸಬೇಕಾದ ಯಾವುದಾದರೂ ಎರಡು ಕಾನೂನಿನ ವಿಹಿತಾಚಾರಗಳನ್ನು ತಿಳಿಸಿ.

d) ಆದ್ಯತೆ-ಸಾಲಗಾರರು ಯಾರು ? ಉದಾಹರಣೆ ಕೊಡಿ.

e) ಕಂಪೆನಿಯ ವಿಲೀನೀಕರಣದ ಎರಡು ಉದ್ದೇಶಗಳೇನು ?

f) ಕಂಪೆನಿಯ ವಿವಿಧ ವಿಸರ್ಜನಾ ವಿಧಗಳನ್ನು ತಿಳಿಸಿ.

g) ವಂತಿಗೆದಾರರು ಎಂದರೇನು ?

h) ಖರೀದಿ ಮಾಡಿದ ಕಂಪೆನಿಯು ನೀಡುವ ಸಾಲಪತ್ರಗಳನ್ನು ಖರೀದಿ ಮೌಲ್ಯದ ಭಾಗವೆಂದು ಪರಿಗಣಿಸಬಹುದೇ ? ಏಕೆ ?

i) ವ್ಯವಹಾರದ ನಿವ್ವಳ ಬೆಲೆಯು ಕೊಂಡುಕೊಳ್ಳುವಿಕೆಯ ಬೆಲೆಗಿಂತ ಹೆಚ್ಚಾದಾಗ ಅದರ ಅಂತರವನ್ನು ಹೇಗೆ ವ್ಯವಹರಿಸುವಿರಿ ?

j) ವಿಸರ್ಜನಾಧಿಕಾರಿಯ ಕಾರ್ಯಗಳು ಯಾವುವು ?

## ವಿಭಾಗ - ಬಿ

ಯಾವುದಾದರೂ **ಮೂರು** ಪ್ರಶ್ನೆಗಳನ್ನು ಉತ್ತರಿಸಿ. ಪ್ರತಿಪ್ರಶ್ನೆಗೆ**8** ಅಂಕಗಳು. **(3×8=24)**

2. ಕಂಪೆನಿಯ ಪುನರ್ರಚನೆಗಾಗಿ 'ಎ' ಕಂಪೆನಿಯು ನಿರ್ಧರಿಸಿತು. ಕಂಪೆನಿಯ ಷೇರುದಾರರು ತಮಗೆ ಬರಬೇಕಾಗಿದ್ದ 10 ರೂ.ನ 1,00,000 ಷೇರುಗಳಿಗೆ ಬದಲಾಗಿ ಕೆಳಗೆ ತಿಳಿಸಿರುವಂತೆ ಬದಲಾವಣೆ ಒಪ್ಪಿಕೊಂಡರು.

   a) ಅವರ ಪ್ರಸ್ತುತ ಹಿಡುವಳಿಯ 2/5 ರಷ್ಟಕ್ಕೆ ಪೂರ್ತಿ ಸಂದಾಯವಾದ ಷೇರುಗಳು.

   b) ಮೇಲೆ ತಿಳಿಸಿರುವ ಹೊಸ ಷೇರುಗಳ ಹಿಡುವಳಿಯ 1/5 ರಷ್ಟಕ್ಕೆ ಶೇ. 5 ರ ಪ್ರಥಮ ಹಕ್ಕಿನ ಷೇರುಗಳು.

   c) ಶೇ. 6 ರ 1,20,000 ರೂಪಾಯಿಗಳ ಸಾಲ ಪತ್ರಗಳು.

   ನಂತರ ಸಾರ್ವಜನಿಕರಿಗೆ 1,00,000 ರೂಗಳ ಸಾಲ ಪತ್ರಗಳನ್ನು ನೀಡಿ ಅದರ ಬಾಬ್ತಿಗೆ ಪೂರ್ತಿ ಹಣ ಸಾರ್ವಜನಿಕರಿಂದ ಸ್ವೀಕರಿಸಿತು. 4,00,000 ರೂ. ಮೌಲ್ಯದ ಕೀರ್ತಿಮೌಲ್ಯವನ್ನು 3,00,000 ರೂ.ಗಳಿಗೆ ಇಳಿಸಬೇಕು. ಯಂತ್ರೋಪಕರಣಗಳನ್ನು 2,00,000 ರೂ. ಗಳಿಂದ 1,50,000 ರೂ.ಗಳಿಗೆ ಇಳಿಸಬೇಕು. ಭೋಗ್ಯಾಧಾರಿತ ಆಸ್ತಿಯನ್ನು 3,00,000 ರೂ.ಗಳಿಂದ 2,50,000 ರೂ.ಗಳಿಗೆ ಕಡಿತಗೊಳಿಸಬೇಕು. ಮೇಲೆ ತಿಳಿಸಿರುವ ಅಂಶಗಳಿಗೆ ರೋಜು ಪುಸ್ತಕದಲ್ಲಿ ದಾಖಲೆ ಮಾಡಿ.

3. 'ಎ' ಕಂಪೆನಿ ನಿಯಮಿತದ ಆಸ್ತಿ ಜವಾಬ್ದಾರಿ ಪಟ್ಟಿಯು 31-03-2013 ರಂದು ಕೆಳಕಂಡಂತಿದೆ.

| **ಜವಾಬ್ದಾರಿಗಳು** | **ರೂ.** | **ಆಸ್ತಿಗಳು** | **ರೂ.** |
|---|---|---|---|
| ಷೇರು ಬಂಡವಾಳ | | ಭೂಮಿ ಮತ್ತು ಕಟ್ಟಡ | 2,00,000 |
| ರೂ. 10 ರ ಷೇರುಗಳು | 3,00,000 | ಯಂತ್ರಗಳು | 1,00,000 |
| ಧನಿಗಳು | 60,000 | ಪೀಠೋಪಕರಣ | 10,000 |
| ಬ್ಯಾಂಕ್ ಮೀರೆಳೆತ | 40,000 | ಋಣಿಗಳು | 20,000 |
| | | ಸರಕು ಶಿಲ್ಕು | 20,000 |
| | | ಕೈಯಲ್ಲಿ ಮತ್ತು ಬ್ಯಾಂಕಿನಲ್ಲಿ ನಗದು | 50,000 |
| | **4,00,000** | | **4,00,000** |

ಮೇಲ್ಕಂಡ ಕಂಪೆನಿಯನ್ನು ಮುಚ್ಚಲಾಯಿತು ಮತ್ತು ಎಲ್ಲಾ ಆಸ್ತಿ ಜವಾಬ್ದಾರಿಗಳನ್ನು "ಬಿ" ಕಂಪೆನಿ ನಿಯಮಿತಕ್ಕೆ ರೂ. 4,00,000 ಖರೀದಿ ಮೌಲ್ಯಕ್ಕೆ ಮಾರಲಾಯಿತು. ಖರೀದಿ ಮೌಲ್ಯವನ್ನು ಕೆಳಕಂಡಂತೆ ಪಾವತಿ ಮಾಡುವುದು.

   a) ನಗದು ರೂ. 1,00,000

   b) 10 ರೂ. ಬೆಲೆಯ 20,000 ಸಾಮಾನ್ಯ ಷೇರುಗಳನ್ನು ರೂ.5 ಪ್ರೀಮಿಯಂ ದರದಲ್ಲಿ ನೀಡುವುದು. ರೂ. 20,000 ವಿಲೇವಾರಿ ವೆಚ್ಚಗಳನ್ನು ಖರೀದಿ ಮಾಡಿದ ಕಂಪೆನಿಯು ಪಾವತಿ ಮಾಡಿದೆ ಎಂದು ಊಹಿಸಿ 'ಬಿ' ಕಂಪೆನಿ ನಿಯಮಿತ ಪುಸ್ತಕಗಳಲ್ಲಿ ರೋಜು ದಾಖಲೆಗಳನ್ನು ಬರೆಯಿರಿ.

4. 'A' ನಿಯಮಿತ ಮತ್ತು 'B' ನಿಯಮಿತ ಕಂಪೆನಿಗಳ ಆಸ್ತಿ ಜವಾಬ್ದಾರಿ ಪಟ್ಟಿಗಳು 31-03-2013 ರಂದು ಕೆಳಕಂಡಂತಿದೆ.

| ಜವಾಬ್ದಾರಿಗಳು | A ನಿಯಮಿತ | B ನಿಯಮಿತ | ಆಸ್ತಿಗಳು | A ನಿಯಮಿತ | B ನಿಯಮಿತ |
|---|---|---|---|---|---|
| ಷೇರು ಬಂಡವಾಳ | | | ಸ್ಥಿರ ಆಸ್ತಿಗಳು | 2,70,000 | 1,40,000 |
| 10 ರೂಗಳ ಷೇರುಗಳು | 3,00,000 | 1,50,000 | ಋಣಿಗಳು | 80,000 | 60,000 |
| ಕಾಯ್ದಿರಿಸಿದ ನಿಧಿ | 60,000 | 40,000 | ಸರಕು ಶಿಲ್ಕು | 50,000 | 30,000 |
| ಧನಿಗಳು | 60,000 | 40,000 | ಬರಬೇಕಾದ | | |
| | | | ಹುಂಡಿಗಳು | 15,000 | 4,000 |
| ಕೊಡಬೇಕಾದ ಹುಂಡಿಗಳು | 5,000 | 10,000 | ಬ್ಯಾಂಕ್ ಶಿಲ್ಕು | 10,000 | 6,000 |
| | **4,25,000** | **2,40,000** | | **4,25,000** | **2,40,000** |

ಈ ಎರಡು ಕಂಪೆನಿಗಳೂ ಸಂಯೋಜನೆಗೊಂಡು C ನಿಯಮಿತ ಕಂಪೆನಿ ರೂಪುಗೊಳಿಸಲು ನಿರ್ಧರಿಸಿವೆ. C ನಿಯಮಿತವು ಎರಡೂ ಕಂಪೆನಿಗಳ ಆಸ್ತಿ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತದೆ.

i) A ನಿಯಮಿತದ ಷೇರುದಾರರಿಗೆ ಅವರ ಪ್ರತಿ 3 ಷೇರುಗಳಿಗೆ 10ರೂ. ಬೆಲೆಯ 4 ಷೇರುಗಳನ್ನು 12.50 ದರದಲ್ಲಿ ನೀಡುವುದು.

ii) B ನಿಯಮಿತದ ಆಸ್ತಿ ಜವಾಬ್ದಾರಿಗಳನ್ನು ಪುಸ್ತಕ ಬೆಲೆಗೆ ವಹಿಸಿಕೊಳ್ಳುವುದು. ಆದರೆ ಋಣಿಗಳು ಮತ್ತು ಬರಬೇಕಾದ ಹುಂಡಿಗಳ ಮೇಲೆ ಶೇಕಾಡ 5 ರಷ್ಟು ಕಾಯ್ದಿರಿಸುವುದು. ಸ್ಥಿರ ಆಸ್ತಿಗಳ ಮೇಲೆ ಶೇಕಡಾ10 ಸವಕಳಿ ತೆಗೆಯುವುದು. 'B' ನಿಯಮಿತದ ಕೀರ್ತಿಮೌಲ್ಯವನ್ನು ರೂ. 27,200 ಎಂದು ಮೌಲ್ಯ ಕಟ್ಟಲಾಗಿದೆ. ಖರೀದಿ ಮೌಲ್ಯವನ್ನು 10 ರೂ. ಬೆಲೆಯ 12.50 ದರದಲ್ಲಿ ಚುಕ್ತಾ ಮಾಡುವುದು. 'A' ನಿಯಮಿತ ಮತ್ತು 'B' ನಿಯಮಿತ ಪುಸ್ತಕಗಳಲ್ಲಿ ರೋಜುದಾಖಲೆಯನ್ನು ಬರೆಯಿರಿ ಮತ್ತು 'C' ನಿಯಮಿತದ ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿ.

5. ಅನಫಾರ್ಚುನೇಟ್ ಕಂಪೆನಿಯು ಮಾರ್ಚ್ 31 2013 ರಂದು ಸ್ವಯಂ ವಿಸರ್ಜನೆಗೊಂಡಾಗ ಅದರ ಪರಿಸ್ಥಿತಿ ಇಂತಿದ್ದಿತು :

ರೂ. 25,000 ಆದ್ಯತೆಯ ಮೊಬಲಗಳನ್ನು ಒಳಗೊಂಡ ಭದ್ರತೆ ಇಲ್ಲದ ಧನಿಗಳೂ ರೂ. 2,00,000. ಯಂತ್ರ ಮತ್ತು ಸ್ಥಾವರದ ಭದ್ರತೆ ಹೊಂದಿರುವ ಸಾಲಗಳು ರೂ. 1,00,000, ಕೈನಲ್ಲಿ ನಗದು ರೂ. 5,000, ವಿಸರ್ಜನಾಧಿಕಾರಿಯು ಯಂತ್ರ ಮತ್ತು ಸ್ಥಾವರಗಳನ್ನು ಮಾರಿ ರೂ. 75,000 ಹಾಗೂ ಇತರೇ ಆಸ್ತಿಗಳನ್ನು ಮಾರಿ

ರೂ. 50,000 ಪಡೆದನು. ವಿಸರ್ಜನಾಧಿಕಾರಿಯ ಖರ್ಚು ರೂ. 5,000 ವಾಯಿತು. ಮತ್ತು ಅವನ ಸಂಭಾವನೆಯನ್ನು ವಸೂಲಾದ ಹಣದ ಮೇಲೆ ಶೇ. 4 (ನಗದನ್ನೂ ಸೇರಿಸಿ) ಮತ್ತು ಭದ್ರತೆ ಇಲ್ಲದ ಧನಿಗಳಿಗೆ ಹಂಚುವ ಹಣದ ಮೇಲೆ ಶೇ. 2 ಎಂದೂ ತೀರ್ಮಾನಿಸಲಾಗಿದೆ. (ಆದ್ಯತೆಯ ಧನಿಗಳೂ ಸೇರಿದಂತೆ). ವಿಸರ್ಜನಾಧಿಕಾರಿಯ ಅಂತಿಮ ವಿವರಣಾ ಪಟ್ಟಿಯನ್ನು ತಯಾರಿಸಿ.

6. ಆಂತರಿಕ ಪುನಾರಚನೆ ಹಾಗೂ ಬಾಹ್ಯ ಪುನಾರಚನೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

## ವಿಭಾಗ - ಸಿ

ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಹದಿನೈದು** ಅಂಕಗಳು. **(4×15=60)**

7. A ಕಂಪೆನಿಯು 31-12-2011 ರಂದು ಸ್ವಪ್ರೇರಿತ ವಿಸರ್ಜನೆಗೆ ಒಳಗಾಯಿತು. ಅಂದಿನ ಆಸ್ತಿಹೊಣೆ ಪಟ್ಟಿ ಈ ರೀತಿಯಾಗಿತ್ತು.

| **ಹೊಣೆಗಳು** | **ರೂ.** | **ಆಸ್ತಿಗಳು** | **ರೂ.** |
|---|---|---|---|
| ಷೇರು ಬಂಡವಾಳ : | | ಭೂಮಿ ಮತ್ತು ಕಟ್ಟಡ | 2,00,000 |
| 4000, 6% ಸಂಚಿತ ಆದ್ಯತಾ ಷೇರುಗಳು, ತಲಾ ರೂ.100 | | ಯಂತ್ರಗಳು | 5,00,000 |
| ಪೂರ್ಣ ಪಾವತಿಯಾಗಿದೆ | 4,00,000 | ಏಕಸ್ವಗಳು | 80,000 |
| 2000 ಸಾಮಾನ್ಯ ಷೇರುಗಳು | | ದಾಸ್ತಾನು | 1,10,000 |
| ತಲಾ ರೂ. 100 ರೂ.ಗಳ | | | |
| ರೂ. 75 ಪಾವತಿಯಾಗಿದೆ | 1,50,000 | ಸಾಲಗಾರರು | 2,20,000 |
| 6000 ಸಾಮಾನ್ಯ ಷೇರುಗಳಿಂತಲೂ | | ಬ್ಯಾಂಕನಲ್ಲಿ ನಗದು | 60,000 |
| ರೂ. 100 ಗಳ ರೂ. 60 | | ಲಾಭ ನಷ್ಟ ಖಾತೆ | 2,40,000 |
| ಪಾವತಿಯಾಗಿದೆ | 3,60,000 | | |
| ಶೇ. 5 ಅಡಮಾನ ಡಿಬೆಂಚರ್‌ಗಳು | 2,00,000 | | |
| ಡಿಬೆಂಚರ್‌ಗಳ ಮೇಲೆ ಬಡ್ಡಿ ಬಾಕಿ | 10,000 | | |
| ಸಾಲಿಗರು | 2,90,000 | | |
| | **14,10,000** | | **14,10,000** |

ಆದ್ಯತಾ ಷೇರುಗಳ ಡಿವಿಡೆಂಡ್ ಎರಡು ವರ್ಷ ಬಾಕಿಯಿದೆ. ಸಾಲಿಗರಲ್ಲಿ ರೂ. 1,00,000 ಗಳ ಭೂಮಿ ಮತ್ತು ಕಟ್ಟಡಗಳ ಆಧಾರದ ಮೇಲಿನ ಸಾಲವೂ ಸೇರಿದೆ.

ಆಸ್ತಿಗಳ ವಿಲೇವಾರಿಯಿಂದ ಬಂದದ್ದು:

ಭೂಮಿ ಮತ್ತು ಕಟ್ಟಡ ರೂ. 2,40,000, ಯಂತ್ರಗಳು ರೂ. 4,00,000 ಏಕಸ್ವಗಳು ರೂ. 60,000, ದಾಸ್ತಾನು ರೂ. 1,20,000, ಸಾಲಗಾರರು ರೂ. 1,60,000, ವಿಸರ್ಜನಾ ವೆಚ್ಚ 21,800. ವಿಲೇವಾರಿಯಾದ ಎಲ್ಲಾ ಆಸ್ತಿಗಳ ಮೇಲೆ (ನಗದು ಹೊರತು) ಶೇ. 3 ಮತ್ತು ಸಾಧಾರ ಸಾಲಿಗರಿಗಾದ ಪಾವತಿಯ ಮೇಲೆ ಶೇ. 2 ರಂತೆ ವಿಸರ್ಜನಾಧಿಕಾರಿಗೆ ಕಮಿಷನ್ ಸಲುತ್ತದೆ. ಸಾಲಗಾರರು ರೂ. 30,000, ಪಾವತಿಗಳನ್ನು30-06-2012 ರಂದು ಮಾಡಿರುತ್ತಾರೆ.

ವಿಸರ್ಜನಾಧಿಕಾರಿಯ ಅಂತಿಮ ಲೆಕ್ಕ ವಿವರ ಪಟ್ಟಿಯನ್ನು ತಯಾರಿಸಿ.

8. 'Y' ನಿಯಮಿತ ಕಂಪೆನಿಯು ತನ್ನ ವ್ಯವಹಾರವನ್ನು X ಕಂಪೆನಿಗೆ 31-03-2013 ರಂದು ಮಾರಾಟ ಮಾಡಿರುತ್ತಾರೆ. X ಕಂಪೆನಿಯು ಎಲ್ಲಾ ಆಸ್ತಿಗಳನ್ನು ತೆಗೆದುಕೊಂಡಿದೆ. (ನಗದು, ಕೀರ್ತಿ ಮೌಲ್ಯ ಹೊರತುಪಡಿಸಿ) ಪುಸ್ತಕದ ಬೆಲೆಯ ಶೇ. 10 ರಷ್ಟು ಕಡಿತಗೊಳಿಸಿ. ಕೀರ್ತಿಮೌಲ್ಯಕ್ಕಾಗಿ ರೂ. 1,60,000 ಕೊಟ್ಟು ಸಾಲ ಪತ್ರಗಳನ್ನು ತೆಗೆದುಕೊಂಡು ಹೋಗಿದೆ, ಲೀನಗೊಳ್ಳುವ ದಿನ X ಕಂಪೆನಿಯ ಆಢಾವೆ ಪತ್ರಿಕೆ ಹೀಗಿದೆ :

| **ಹೊಣೆಗಾರಿಕೆ** | **ರೂ.** | **ಆಸ್ತಿ** | **ರೂ.** |
|---|---|---|---|
| ಸಾಮಾನ್ಯ ಷೇರುಗಳು | | ಕೀರ್ತಿಮೌಲ್ಯ | 1,00,000 |
| (ರೂ. 100 ರಂತೆ) | 4,00,000 | ಭೂಮಿ ಮತ್ತು ಕಟ್ಟಡ | 3,00,000 |
| ಸಾಮಾನ್ಯ ನಿಧಿ | 1,40,000 | ಯಂತ್ರೋಪಕರಣ | 1,66,000 |
| 5 % ಸಾಲ ಪತ್ರಗಳು | 2,00,000 | ದಾಸ್ತಾನು | 70,000 |
| ಧನಿಗಳು | 60,000 | ಬರತಕ್ಕ ಹುಂಡಿ | 9,000 |
| | | ಋಣಿಗಳು | 55,000 |
| | | ಬ್ಯಾಂಕಿನಲ್ಲಿ ನಗದು | 1,00,000 |
| | **8,00,000** | | **8,00,000** |

X ಕಂಪೆನಿಯು ಕೊಂಡ ಬೆಲೆಯನ್ನು Y ಕಂಪೆನಿಗೆ ರೂ. 100 ರ 3000 ಷೇರುಗಳನ್ನು ಪ್ರತಿ ಷೇರಿಗೆ ರೂ. 10 ಹೆಚ್ಚಿಗೆ ಕೊಟ್ಟು ಉಳಿದ ಹಣವನ್ನು ನಗದಾಗಿ ಕೊಟ್ಟಿದೆ. Y ಕಂಪೆನಿಯ ಪುಸ್ತಕದಲ್ಲಿ ಖಾತೆಗಳನ್ನು ಬರೆದು ಮತ್ತು X ಪುಸ್ತಕದಲ್ಲಿ ರೋಜನ್ನು ದಾಖಲಿಸಿ.

9. ನಿರಂತರ ಬೃಹತ್ ನಷ್ಟಗಳಿಂದ 'Z' ಕಂಪೆನಿಯು ಸ್ವಯಂ ವಿಸರ್ಜನೆಗೆ ಮುಂದಾಗಿದೆ ಹಾಗೂ ಅದನ್ನು 'Z ನ್ಯೂ ಕಂಪೆನಿ' ಎಂಬ ಹೆಸರಿನಲ್ಲಿ ಪುನರ್ ರಚಿಸಲು ಉದ್ದೇಶಿಸಲಾಗಿದೆ.

ಪುನರ್ ರಚನೆಯ ದಿನದಂದು 'Z' ಕಂಪೆನಿಯ ಆಸ್ತಿ ಜವಾಬ್ದಾರಿ ಪಟ್ಟಿಯು ಕೆಳಕಂಡಂತಿದೆ.

| **ಜವಾಬ್ದಾರಿಗಳು** | **ರೂ.** | **ಆಸ್ತಿಗಳು** | **ರೂ.** |
|---|---|---|---|
| ಬಂಡವಾಳ: | | ಕಟ್ಟಡ | 3,92,500 |
| 5 ರೂ. ಬೆಲೆಯ 2,00,000 | | | |
| ಷೇರುಗಳು | 10,00,000 | ಯಂತ್ರಗಳು | 2,39,000 |
| ಧನಿಗಳು | 30,000 | ಪೀಠೋಪಕರಣ | 19,400 |
| ಬ್ಯಾಂಕ್ ಸಾಲ | 15,000 | ಸರಕು ಶಿಲ್ಕು | 91,410 |
| ಕೊಡಬೇಕಾದ ಹುಂಡಿಗಳು | 10,000 | ಋಣಿಗಳು | 1,09,100 |
| | | ಬ್ಯಾಂಕ್ | 3,590 |
| | | ಲಾಭ-ನಷ್ಟ ಖಾತೆ | 2,00,000 |
| | **10,55,000** | | **10,55,000** |

ಪುನರ್ ರಚನೆಯ ವ್ಯವಸ್ಥೆಯು ಈ ಕೆಳಕಂಡಂತಿದೆ.

i) ಹೊಸ ಕಂಪೆನಿಯು ಹಳೆ ಕಂಪೆನಿಯ ಎಲ್ಲಾ ಆಸ್ತಿಗಳನ್ನೂ ತೆಗೆದುಕೊಳ್ಳುತ್ತದೆ ಮತ್ತು ಜವಾಬ್ದಾರಿಗಳನ್ನು ತೆಗೆದುಕೊಳ್ಳುವುದಿಲ್ಲ.

ii) ಹೊಸ ಕಂಪೆನಿಯ ಬಂಡವಾಳವು 5 ರೂ. ಬೆಲೆಯ 5,00,000 ಷೇರುಗಳಾಗಿರುತ್ತದೆ.

iii) ಹೊಸ ಕಂಪೆನಿಯು 5 ರೂ. ಬೆಲೆಯ 2,80,000 ಷೇರುಗಳನ್ನು ನೀಡುವುದು. ಪ್ರತಿ ಷೇರಿಗೆ 2.50 ರೂ. ಪೂರ್ಣ ಪಾವತಿಯಾದಂತೆ ನಗದು ರೂ. 1,00,000 ಖರೀದಿ ಮೌಲ್ಯದ ರೂಪದಲ್ಲಿ ನೀಡುತ್ತದೆ.

iv) ಉಳಿದ ಶಿಲ್ಕು ಪ್ರತಿ ಷೇರಿಗೆ 2.50 ರೂ. ನ್ನು ಹೊಸ ಕಂಪೆನಿಯ ಸದಸ್ಯರು ಕೊಡಬೇಕಾಗಿದ್ದು ಅದನ್ನು ಪೂರ್ಣ ಪಡೆಯಲಾಗಿದೆ.

Z ಕಂಪೆನಿಯ ಪುಸ್ತಕಗಳಲ್ಲಿ ಅಗತ್ಯವಾದ ಖಾತೆಗಳನ್ನು ತೆರೆಯಿರಿ ಮತ್ತು ನ್ಯೂ Z ಕಂಪೆನಿಯ ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿರಿ.

10. 'A' ಕಂಪೆನಿಯ ಅಢಾವೆ ಪತ್ರಿಕೆ ಈ ಕೆಳಕಂಡಂತೆ ಇದೆ.

| ಜವಾಬ್ದಾರಿಗಳು | ರೂ. | ಆಸ್ತಿಗಳು | ರೂ. |
|---|---|---|---|
| 100ರೂ. ನ 38000 ಷೇರುಗಳು | 38,00,000 | ಭೂಮಿ ಮತ್ತು ಕಟ್ಟಡ | 2,00,000 |
| ಸಾಲಿಗರು | 2,00,000 | ಯಂತ್ರೋಪಕರಣ | 5,20,000 |
| ಸಾಲಪತ್ರಗಳು | 2,00,000 | ಪೀಠೋಪಕರಣ | 40,000 |
| | | ದಾಸ್ತಾನು | 7,40,000 |
| | | ಸಾಲಗಾರರು | 3,60,000 |
| | | ಸುನಾಮ | 4,00,000 |
| | | ಲಾಭ ನಷ್ಟ ಖಾತೆ | 19,40,000 |
| | **42,00,000** | | **42,00,000** |

ಈ ಕೆಳಕಂಡಂತೆ ಕಂಪೆನಿಯು ಆಂತರಿಕ ಪುನರ್ ರಚನೆಯಾಯಿತು.

a) 100 ರೂ. ಬೆಲೆಯ ಷೇರುಗಳನ್ನು ಸಮಸಂಖ್ಯೆಯ ರೂ. 40ಕ್ಕೆ ಇಳಿಸಬೇಕು.

b) ಸಾಲಪತ್ರದಾರರು2000 ಹೊಸ ಷೇರುಗಳ40 ರೂ. ಗಳ ಷೇರುಗಳನ್ನು ಪೂರ್ಣಪಾವತಿಯಾಗಿ ಬಿಡುಗಡೆ ಮಾಡುವುದು.

c) ಉಳಿದಿರುವ ಹಣವನ್ನು ಸುನಾಮವನ್ನು ಕಳೆಯಲು ಲಾಭ-ನಷ್ಟ ಶಿಲ್ಕು ತೆಗೆಯಲು ಉಳಿದ ಹಣದಲ್ಲಿ ಯಂತ್ರೋಪಕರಣ ಕಡಿಮೆ ಮಾಡಲು ಉಪಯೋಗಿಸಲಾಗಿದೆ.

d) ಕಂಪೆನಿಯ ಒಟ್ಟು ಬಂಡವಾಳ100 ರೂ. ನ 40,000 ಷೇರುಗಳ ರೋಜು ದಾಖಲೆ ಬರೆಯಿರಿ, ಬಂಡವಾಳ ಇಳಿಕೆ ಖಾತೆ ಮತ್ತು ಪುನರ್ ರಚಿತ ಅಢಾವೆ ಪತ್ರಿಕೆ ಬರೆಯಿರಿ.

11. ಕೆಳಗೆ ಎರಡು ಕಂಪನಿಗಳ31-03-2013ರ ಆಸ್ತಿ ಹೊಣೆ ಪಟ್ಟಿಗಳನ್ನು ಕೊಡಲಾಗಿದೆ.

**'A ಕಂಪನಿ'**

| ಹೊಣೆಗಾರಿಕೆ | ರೂ. | ಆಸ್ತಿಗಳು | ರೂ. |
|---|---|---|---|
| 10ರೂ. ಗಳ ಪೂರ್ತಿ ಸಂದಾಯವಾದ ಶೇರುಗಳು | 30,00,000 | ಸುನಾಮ | 3,00,000 |
| | | ಮುಕ್ತ ಆಸ್ತಿಗಳು | 8,00,000 |
| ಷೇರು ಪ್ರೀಮಿಯಂ | 9,000 | ಯಂತ್ರಗಳು | 7,00,000 |
| ಸಾಮಾನ್ಯ ಮೀಸಲು | 2,00,000 | ದಾಸ್ತಾನು | 13,64,000 |
| ಲಾಭ ನಷ್ಟ ಖಾತೆ | 3,31,300 | ಸಾಲಗಾರರು | 5,17,000 |
| 8% ಡಿಬೆಂಚರ್‌ಗಳು | 7,00,000 | ಬ್ಯಾಂಕಿನಲ್ಲಿ ಶಿಲ್ಕು | 6,75,000 |
| ಸಾಲಿಗರು | 1,15,700 | | |
| | **43,56,000** | | **43,56,000** |

**'B ಕಂಪನಿ'**

| | | | |
|---|---|---|---|
| ರೂ. 10ರ ಪೂರ್ತಿ ಪಾವತಿಯಾದ ಷೇರುಗಳು | 7,80,000 | ಸುನಾಮ | 1,00,000 |
| | | ಮುಕ್ತ ಆಸ್ತಿಗಳು | 3,60,000 |
| 10% ಡಿಬೆಂಚರ್‌ಗಳು | 1,40,000 | ಯಂತ್ರಗಳು | 2,00,000 |
| ಮೀರಲೆತ | 12,000 | ದಾಸ್ತಾನು | 3,24,000 |
| ಸಾಲಿಗರು | 5,14,000 | ಸಾಲಗಾರರು | 1,90,000 |
| | | ಲಾಭ ನಷ್ಟ ಖಾತೆ | 2,72,000 |
| | **14,46,000** | | **14,46,000** |

ಎರಡೂ ಕಂಪನಿಗಳು ಸಂಯೋಗಗೊಳ್ಳಲು ನಿರ್ಧರಿಸಿದವು. ಆಸ್ತಿಹೊಣೆ ಪಟ್ಟಿಗಳ ದಿನದಂದು AB ಕಂಪನಿಯ ನಿಯಮಿತ ಎಂಬ ಹೊಸ ಕಂಪನಿಯು ರಚಿತವಾಯಿತು. ಅದರ ಅಧಿಕೃತ ಬಂಡವಾಳ ತಲಾ ರೂ. 10ರ 50,00,000 ಸಂಯೋಗದ ಒಪ್ಪಂದಗಳು ಹೀಗಿವೆ.

A ಕಂಪನಿ :

i) ಹೊಸ ಕಂಪನಿಯು ತಲಾ ರೂ. 10ರ 6 ಷೇರುಗಳನ್ನು A ಕಂಪನಿಯು 5 ಷೇರುಗಳಿಗೆ ಪ್ರತಿಯಾಗಿಯು ಮತ್ತು ರೂ. 20,000 ಗಳನ್ನು ನಗದಾಗಿಯೂ ಸಲ್ಲಿಸತಕ್ಕದ್ದು.

ii) ಡಿಬೆಂಚರ್‌ದಾರರಿಗೆ ಹೊಸ ಕಂಪನಿಯು ಶೇ. 7 ರಂತೆ ಬಡ್ಡಿಗಳಿಸುವ ಸೂಕ್ತ ಡಿಬೆಂಚರ್‌ಗಳನ್ನು ನೀಡಿ ಅಷ್ಟೇ ಆದಾಯ ಬರುವ ವ್ಯವಸ್ಥೆ ಮಾಡತಕ್ಕದ್ದು.

B ಕಂಪನಿ :

i) ಹೊಸ ಕಂಪೆನಿಯು ತಲಾ ರೂ. 10ರ ಒಂದು ಷೇರನ್ನು B ಕಂಪೆನಿಯ 3 ಷೇರುಗಳಿಗೆ ಪ್ರತಿಯಾಗಿಯೂ ಮತ್ತು ರೂ. 10,000 ಗಳನ್ನು ನಗದಾಗಿಯೂ ಸಲ್ಲಿಸತಕ್ಕದ್ದು.

ii) ಡಿಬೆಂಚರ್‌ದಾರರಿಗೆ ಹೊಸ ಕಂಪೆನಿಯು ಶೇ. 7 ರಂತೆ ಬಡ್ಡಿಗಳಿಸುವ ಅಷ್ಟೇ ಆದಾಯ ಬರುವ ಸೂಕ್ತ ಡಿಬೆಂಚರ್ ನೀಡತಕ್ಕದ್ದು.

ಹೊಸ ಕಂಪೆನಿಯು ಎರಡೂ ಕಂಪೆನಿಗಳ ಆಸ್ತಿ ಹೊಣೆಗಳನ್ನು ಸಂಪೂರ್ಣವಾಗಿ ವಹಿಸಿಕೊಂಡಿತು. 'AB' ಕಂಪೆನಿಯ ಪುಸ್ತಕದಲ್ಲಿ ಮೇಲಿನ ವ್ಯವಸ್ಥೆಗಳನ್ನು ದಾಖಲಿಸಲು ರೋಜು ದಾಖಲೆಗಳನ್ನು ಬರೆದು ಆರಂಭದ ಆಸ್ತಿ ಹೊಣೆಪಟ್ಟಿ ತಯಾರಿಸಿವೆ.